ಅಪ್ಪನ ಮಣ್ಣಿಗೆ ಅಂತ ಊರಿಗೆ ಹೋಗಿದ್ದೆ. ಆಮೇಲೆ ಮತ್ತೆ ಊರಿನ ಕಡೆ ತಲೆ ಹಾಕಲಿಲ್ಲ. ನಿನ್ನ ಮಾವಂದಿರು ಅಪರೂಪಕ್ಕೆ ಕಾಗದ ಬರೀತಾರೆ. ಅವರ ಮಕ್ಕಳು ಇಂಗ್ಲಿಷ್ ಮೀಡಿಯಂನಲ್ಲಿ ಓದ್ತಿದಾರಂತೆ! ನೀನು ಕನ್ನಡ ಮೀಡಿಯಂ ಆದರೂ ಸರಿ, ಚೆನ್ನಾಗಿ ಓದಬೇಕು ಅಂತ ಹೇಳುತ್ತ, ನೀನು ಈ ಅಜ್ಜನಂತೆ ಆಗಬೇಕು ಅನ್ನುತ್ತ, ಗೋಡೆಯ ಮೇಲಿದ್ದ ಬಾಬಾ ಸಾಹೇಬರ ಕಡೆಗೆ ನೋಡುತ್ತ ಹೇಳುತ್ತಿದ್ದಳು.

'ಅವ್ವಾ, ಇವತ್ತು ಸ್ಕೂಲಲ್ಲಿ ಚರ್ಚಾ ಸ್ಪರ್ಧೆ ಇತ್ತು. ನಂಗೆ ಫಸ್ಟ್ ಪ್ರೈಜು ಬಂತು. ಬಹುಮಾನ ಅಂತ ಈ ಪುಸ್ತಕ ಕೊಟ್ರು. ನೋಡು, ಇದು ಅಜ್ಜನ ಪುಸ್ತಕ. ಊಟಕ್ಕೆ ಬಿಟ್ಟಾಗ ಸ್ವಲ್ಪ ಓದಿದೆ. ಅವರು ನಮ್ಮಂಗೇ ಬಡವರಂತೆ. ಸ್ಕೂಲಲ್ಲಿ ಎಲ್ಲರೂ ಅವರನ್ನು ಕೆಟ್ಟದಾಗಿ ನಡೆಸಿಕೊಂಡರಂತೆ! ಮಣೆ ಮೇಲೆ ಕೂರೋದಕ್ಕೂ ಬಿಡ್ತಿರಲಿಲ್ಲವಂತೆ. ಅವರನ್ನು ಯಾರೂ ಮುಟ್ಟಿಸಿಕೊಳ್ತಿರಲಿಲ್ಲವಂತೆ. ನೆಲದ ಮೇಲೆ ಕೂರಿಸ್ತಿದ್ದರಂತೆ... ' ಅಂತ ಹೇಳುತ್ತ ಅವ್ವನ ಮುಖ ನೋಡಿದ್ದ.

'ಹೌದಪ್ಪ, ಅದು ನಿಜವಂತೆ, ನಾನೂ ಕೇಳಿದ್ದೀನಿ. ಅವರು ಎಲ್ಲವನ್ನೂ ಸಹಿಸಿಕೊಂಡರು. ಆದ್ರೆ ಓದೋದು ಮರೆಯಲಿಲ್ಲ. ಓದಿ ವಕೀಲರಾದರು. ಎಲ್ಲರ ಸಮಕ್ಕೆ ನಿಂತರು. ಮಂತ್ರಿಯೂ ಆಗಿದ್ದರಂತೆ...!

ಅವರಿಂದಾಗಿ ನಮ್ಮಂತ ಬಡವರ ಮಕ್ಕಳು ಸ್ಕೂಲಿಗೆ ಹೋಗಿ ಎಲ್ಲರ ಸಮಕ್ಕೆ ಓದುವಂತಾಗಿದ್ದು. ನೌಕರಿ ಮಾಡುವಂತಾಗಿದ್ದು. ಅವರು ಇಲ್ಲದಿದ್ರೆ ಈ ಜನ ನಮ್ಮನ್ನ ಸುಮ್ಮನೆ ಬಿಡುತ್ತಿದ್ರಾ... ಈಗ್ಲೂ ಬಡವರ ಮಕ್ಳು ಓದೋದು ಈ ಜನಕ್ಕೆ ಇಷ್ಟವಿಲ್ಲ. ಹಂಗಂತ ನಾವು ಸುಮ್ನಿರಬಾರದು, ಅಂತ ಅವ್ವ ಹೇಳುತ್ತಿದ್ದುದು ಮೊದ ಮೊದಲು ಅವನಿಗೆ ಅರ್ಥವೇ ಆಗಿರಲಿಲ್ಲ.

ಕ್ರಮೇಣ ಅವ್ವ ಹೇಳಿದ್ದೆಲ್ಲವೂ ನಿಜ ಅನ್ನೋದು ಅವನ ಅರಿವಿಗೆ ಬಂದಿತ್ತು. ತರಗತಿಯಲ್ಲಿ ಎಲ್ಲರಿಗಿಂತ ನೀನು ಜಾಣ ಅಂತ ಮೇಷ್ಟರು ಹೇಳುತ್ತಿದ್ದರು. ಅದು ಉಳಿದ ಹುಡುಗರಿಗೆ ಇಷ್ಟವಾಗುತ್ತಿರಲಿಲ್ಲ! ದೊಡ್ಡ ಪರೀಕ್ಷೆಗೆ ಮೊದಲು ಸರಸ್ವತಿ ಪೂಜೆ ದಿನ ಮಂಗಳಾರತಿ ತಟ್ಟೆ ಹಿಡಕೊಂಡು ಎಲ್ಲರ ಬಳಿಗೆ ಹೋಗಲು ಮುಂದಾಗಿದ್ದವನನ್ನು ಮೇಷ್ಟರೇ ತಡೆದಿದ್ದರು. ಅವರು ಯಾಕೆ ತಡೆದರು ಅನ್ನೋದು ಅವನಿಗೆ ಅರ್ಥ ಆಗಿರಲಿಲ್ಲ. ಏಳನೇ ಕ್ಲಾಸಿನಲ್ಲಿದ್ದಾಗ ಗಾಂಧೀಜಿ ಅಥವಾ ಬಾಬಾ ಸಾಹೇಬರು ಇಬ್ಬರಲ್ಲಿ ಒಬ್ಬರ ಕುರಿತು ಪ್ರಬಂಧ ಬರೆಯಬೇಕಿತ್ತು. ಯಾರನ್ನು ಕುರಿತು ಬರೆಯುವುದು ಅಂತ. ಗಾಂಧೀಜಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು. ಬಾಬಾ ಸಾಹೇಬರು ಲಕ್ಷಾಂತರ ಬಡವರಲ್ಲಿ ಆತ್ಮವಿಶ್ವಾಸ ತುಂಬಿದವರು. ಇಬ್ಬರೂ ದೊಡ್ಡವರೇ. ಯಾರ ಬಗ್ಗೆ ಬರೆಯಲಿ ಅಂತ ತಲೆ ಕೆಡಿಸಿಕೊಂಡು ಕೂತಿದ್ದೆ. ಅವ್ವ ಗಾಂಧೀಜಿ ಮೇಲೆ ಬರಿ ಅಂದಿದ್ದಳು. ಕೊನೆಗೆ ಬಾಬಾ ಸಾಹೇಬರ ಮೇಲೆ ಬರೆದಿದ್ದೆ.

'ತಾಯಮ್ಮನ ಮಗನ ಕಾಲ ಕೆಳಗೆ ತೂರಿದರೆ ನಿಂಗೆ ಬುದ್ಧಿ ಬರಬೌದು...' ಅಂತ ಸರೀಕ ಹುಡುಗನ ತಾಯೊಬ್ಬಳು ತನ್ನ ಮಗನಿಗೆ ಹೇಳಿದ್ದನ್ನು ಕೇಳಿ ರಾಮಸ್ವಾಮಿಗೆ ಅಚ್ಚರಿಯಾಗಿತ್ತು. ಅವಳ ಮಾತು ಇಷ್ಟವಾಯಿತಾದರೂ ಅವನದೇ ಓರಗೆಯ ಹುಡುಗ ತನ್ನ ಕಾಲ ಕೆಳಗೆ ತೂರುವುದನ್ನು ಊಹಿಸಿಕೊಳ್ಳಲೂ ಅವನಿಗೆ ಆಗಲಿಲ್ಲ. ಅವನಮ್ಮ ಹಾಗೇಕೆ ಹೇಳಿದಳು ಎನ್ನುವುದು ಅರ್ಥವಾಗದಿದ್ದರೂ ಅವಳ ಕಣ್ಣಲ್ಲಿ ನಾನು ಬುದ್ಧಿವಂತ ಅನ್ನಿಸಿತ್ತು. ಅದನ್ನು ಅವ್ವನ ಎದುರು ಹೇಳಿಕೊಂಡು ಬೀಗಿದ್ದ. ನೀನೊಬ್ಬನೇ ಬುದ್ಧಿವಂತ ಅಂತ ಜಂಬ ಪಡಬೇಡ. ನಿನ್ನಜ್ಜ ಎಂದೂ ಅಹಂಕಾರ ಪಡಲಿಲ್ಲ. ನೋಡಿ ನಗೋರ ಮುಂದೆ ಜಾರಿ ಬೀಳಲಿಲ್ಲ. ದೊಡ್ಡ ವಕೀಲ, ಮಂತ್ರಿ ಆದೆ ಅನ್ನೊ ಪಿತ್ತ ಅವರ ತಲೆಗೆ ಏರಲಿಲ್ಲ. ಜನ ಅವರನ್ನು ದೊಡ್ಡವರಂತೆ ನೋಡಿದರು. ಅದೇಂತದೋ ಸಮ್ವಿಧಾನವಂತೆ, ಅದನ್ನೂ ಅವರೇ ಬರೆದರಂತೆ. ಜನರ ಕಷ್ಟ ಸುಖಗಳನ್ನು ನೋಡಿ, ಕೇಳಿ ಸಮ್ವಿಧಾನ ಬರೆದರಂತೆ! ಅದರಿಂದಾಗಿ ನಮ್ಮಂತವರ ಮಕ್ಕಳು ಓದೋಕೆ, ಕೆಲಸಕ್ಕೆ ಸೇರೋಕೆ ಸಹಾಯ ಆಯ್ತಂತೆ